# ಕರ್ನಾಟಕ ವಿಧಾನ ಸಭೆ

# KARNATAKA LEGISLATIVE ASSEMBLY

ಮಂಗಳವಾರ, ದಿನಾಂಕ ೭ನೇ ಜೂನ್ ೧೯೮೮, ಜ್ಯೇಷ್ಠ ೧೭, ಶಕ ೧೯೧೦,

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೦ ಗಂಟೆ ೫೫ ನಿಮಿಷಕ್ಕೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನಲಂಕರಿಸಿದರು.]

## ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

### ಉಡುಪಿ ಸರ್ಕಾರಿ ಆಸ್ಪತ್ರೆ ಕಟ್ಟಡದ ದುರಸ್ತಿ

೨೧೯. ಶ್ರೀ ವಸಂತ್ ವಿ. ಸಾಲಿಯಾನ್ (ಕಾಪು),–ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉಡುಪಿ ಸರ್ಕಾರಿ ಆಸ್ಪತ್ರೆಯ ಕಟ್ಟಡದ ದುರಸ್ತಿ, ಸಿಬ್ಬಂದಿಗಳ ಕೊರತೆ ಮತ್ತು ಔಷಧಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ, ಈ ಕೊರತೆಗಳನ್ನು ನಿವಾರಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ಕಟ್ಟಡದ ದುರಸ್ತಿ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಹಣದ ಕೊರತೆಯಿಂದಾಗಿ ಕಟ್ಟಡದ ದುರಸ್ತಿ ಕೈಗೊಂಡಿಲ್ಲ

ಸಿಬ್ಬಂದಿಯ ಹೆಚ್ಚಿನ ಕೊರತೆ ಇರುವುದಿಲ್ಲ ಅವಶ್ಯಕ ಸಿಬ್ಬಂದಿಯನ್ನು ಒದಗಿಸಲಾಗುವುದು. ಔಷಧಗಳನ್ನು ಆದಷ್ಟುಪಟ್ಟಿಗೆ ನಿಯಮಾನುಸಾರ ಒದಗಿಸಲಾಗುತ್ತಿದೆ.

ಶ್ರೀ ವಸಂತ ವಿ. ಸಾಲಿಯಾನ .—ಸನ್ಮಾನ್ಯ ಅಧ್ಯಕ್ಷರೇ, ಉಡುಪಿ ಸರ್ಕಾರಿ ಆಸ್ಪತ್ರೆಯಲ್ಲಿ ಒಂದನೆಯದಾಗಿ ಅಡುಗೆ ಕೋಣೆ ಸರಿಯಿಲ್ಲ. ಮಳೆಬಿದ್ದರೆ ಸೋರಿ ಹಾಳಾಗುವಂಥ ಪರಿಸ್ಥಿತಿ ಇದೆ. ಅಡುಗೆ ಕೆಲಸಕ್ಕೆ ಸಂಪೂರ್ಣವಾಗಿ ಉಪಯೋಗಿಸದಹಾಗೆ ಅದು ನಾದುರಸ್ತಿಯಲ್ಲಿದೆ. ಆದ್ದರಿಂದ ದಯವಿಟ್ಟು ಮೊದಲು ಅಡುಗೆ ಮನೆಯನ್ನು ರಿಪೇರಿ ಮಾಡಿಸಬೇಕು ಇನ್ನೊಂದು ವಿಚಾರ ಏನೆಂದರೆ ಟಿ ಬಿ.ವಾರ್ಡ್‌ನಲ್ಲಿ ಬಾಗಿಲು, ಕಿಟಕಿ ಮುಂತಾದ್ದು ಯಾವುದೂ ಇಲ್ಲ. ಅಂದರೆ ನಾದುರಸ್ತಿಯಲ್ಲಿದೆ. ಏಕೆಂದರೆ ಎಂಟರೆನ್ಸ್ ಇದೆ, ಆದರೆ ಬಾಗಿಲು ಇಲ್ಲ. ಅದೇರೀತಿ ಕಿಟಕಿಗಳು ಇಲ್ಲ. ಕಟ್ಟಡ ರಿಪೇರಿ ಮಾಡದೆ ಹಲವಾರು ವರ್ಷಗಳಾಯಿತು. ಟಿ ಬಿ.ವಾರ್ಡಿನಲ್ಲಿ ಇನ್ನೊಂದು ವಿಚಾರ ಏನೆಂದರೆ ಅಲ್ಲಿ ನೀರಿನ ವ್ಯವಸ್ಥೆ ಇಲ್ಲ. ಆದ್ದರಿಂದ ಈ ಆಸ್ಪತ್ರೆಯಲ್ಲಿ ಹಲವಾರು ವರ್ಷಗಳಿಂದ ನೀರಿನ ವ್ಯವಸ್ಥೆ ಇಲ್ಲದಂಥ ಪರಿಸ್ಥಿತಿ ಇದೆ. ಹಾಗೆಯೇ ಅಲ್ಲಿ ಲೇಡಿ ಮೆಡಿಕಲ್ ಆಫೀಸರ್ ಇಲ್ಲ. ಪಿ ಡಬ್ಲ್ಯೂ.ಡಿ. ಅಧಿಕಾರಿಗಳಿಗೆ ಹಲವಾರು ಬಾರಿ ನಾನು ಮತ್ತು ಶ್ರೀಮತಿ ಮನೋರಮಾ ಮಧ್ವರಾಜ್‌ರವರು ಮನವಿ ಮಾಡಿದ್ದೇವೆ ಮತ್ತು ಮಾನ್ಯ ಮಂತ್ರಿಗಳ ಗಮನಕ್ಕೆ ಕೂಡ ತಂದಿದ್ದೇವೆ. ಆದರೂ ಸಹ ಈ ಆಸ್ಪತ್ರೆಯಲ್ಲಿ ಪರಿಸ್ಥಿತಿ ಚಿಂತಾಜನಕವಾಗಿದೆ. ನಾನು ಮಾನ್ಯ ಮಂತ್ರಿಗಳ ಮೂಲಕ ಸರ್ಕಾರವನ್ನು ಒತ್ತಾಯ ಪಡಿಸುವುದೇನೆಂದರೆ ಅದಷ್ಟು ಬೇಗ ಈ ಆಸ್ಪತ್ರೆಗೆ ಸಿಬ್ಬಂದಿ ಕೊರತೆ ಅದೇರೀತಿ ಕಟ್ಟಡಗಳ ರಿಪೇರಿ, ಅದೇರೀತಿ ವೈದ್ಯಕೀಯ ಸೌಲಭ್ಯ ಅಂದರೆ ಔಷಧಿಗಳ ಕೊರತೆ ಇರುವುದು. ಈ ಕೊರತೆಗಳನ್ನು ಆದಷ್ಟು

ಬೇಗ ನಿವಾರಿಸಿ ಈ ಬೇಡಿಕೆಗಳನ್ನು ಈಡೇರಿಸಬೇಕೆಂದು ನಾನು ಮಂತ್ರಿಮಹೋದಯರ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬಿ. ರಾಚಯ್ಯ.—೧೯೭೨-೭೩ರಲ್ಲಿ ೨೮ಸಾವಿರ ರೂಪಾಯಿಗಳನ್ನು ಈ ಆಸ್ಪತ್ರೆ ದುರಸ್ತಿಗಾಗಿ ನಿರ್ದೇಶನಾಲಯದಿಂದ ವಿಭಾಗೀಯ ಸಹ ನಿರ್ದೇಶಕರಿಗೆ ಕಳುಹಿಸಿಕೊಟ್ಟಿದ್ದೇವೆ. ಇನ್ನೂ ಕೆಲಸ ಆಗಿಲ್ಲವೆಂದು ಹೇಳುತ್ತಿದ್ದಾರೆ, ಅದರ ಬಗ್ಗೆ ವಿಚಾರ ಮಾಡುತ್ತೇವೆ. ೨೨ಯದು ಕಿಟಕಿ, ಬಾಗಿಲುಗಳ ರಿಪೇರಿ ಮತ್ತು ಅಡಿಗೆ ಮನೆ ಸೋರುತ್ತಿದೆ ಎಂದು ಹೇಳುತ್ತಿದ್ದಾರೆ, ಅದಕ್ಕೋಸ್ಕರವಾಗಿಯೇ ಈ ಹಣವನ್ನು ಮಂಜೂರ್ಮಾಡಿದ್ದೇವೆ. ೧೯೮೮-೮೯ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಪರಿಷತ್ತಿನವರಿಗೆ ಈ ಕೆಲಸವನ್ನು ತೆಗೆದುಕೊಳ್ಳಿ ಎಂದು ೨೧-೫-೮೮ರಲ್ಲಿ ಆದೇಶ ಕಳುಹಿಸಿದ್ದೇವೆ. ಹಾಗೂ ಕೊಟ್ಟಿರತಕ್ಕ ಹಣವನ್ನು ಖರ್ಚು ಮಾಡಬೇಕೆಂದು ಹೇಳಿದ್ದೇವೆ. ಇನ್ನು ಸಿಬ್ಬಂದಿವರ್ಗದಲ್ಲಿ ಈಗ ೯ಜನ ಸಿಬ್ಬಂದಿವರ್ಗದವರು ಇದ್ದಾರೆ, ೧೨ ಜನ ಮಾತ್ರ ಇಲ್ಲ. ಈ ಕೆಳಕಂಡ ಸಿಬ್ಬಂದಿಯವರು ಇಲ್ಲ. ಒಬ್ಬರು ಸರ್ಜನ್ ಕೆಲಸ ಮಾಡುತ್ತಿದ್ದಾರೆ, ಒಂದು ಸೀನಿಯರ್ ಹೆಲ್ತ್ ಆಫೀಸರ್ ಹುದ್ದೆ ಮಾತ್ರ ಖಾಲಿ ಇದೆ. ೬ ಜನ ಅಸಿಸ್ಟೆಂಟ್ ಸರ್ಜನ್ ಹುದ್ದೆಗಳು ಮಂಜೂರಾಗಿದ್ದು, ೬ ಜನರೂ ಹಾಲಿ ಕೆಲಸ ಮಾಡುತ್ತಿದ್ದಾರೆ. ಅಸಿಸ್ಟೆಂಟ್ ಡೆಂಟಲ್ ಸರ್ಜನ್ ಇಲ್ಲ, ಕೊಡಬೇಕಾಗಿದೆ. ನರ್ಸ್ ಸೂಪರಿಂಟೆಂಡೆಂಟ್ ಈಗ ಪ್ರಮೋಟ್ ಆಗಿನೆ, ಅವರನ್ನು ಕಳುಹಿಸಿಕೊಡುತ್ತೇವೆ. ಆಫೀಸ್ ಸೂಪರಿಂಟೆಂಡೆಂಟ್ ಪೋಸ್ಟ್ ಒಂದು ಖಾಲಿ ಇತ್ತು, ಅವರು ಕೆಲಸ ಮಾಡುತ್ತಿದ್ದಾರೆ, ಖಾಲಿ ಇರುವುದು ಒಂದು ಟೈಪಿಸ್ಟ್, ಒಂದು ಎಸ್.ಡಿ.ಸಿ. ಲ್ಯಾಬ್ ಟೆಕ್ನೀಷಿಯನ್ ಒಂದು, ೫ಜನ ಜವಾನರ ಹುದ್ದೆಗಳು ಇವುಗಳನ್ನು ಆದಷ್ಟುಬೇಗ ಭರ್ತಿ ಮಾಡುತ್ತೇವೆ.

ಶ್ರೀ ವಸಂತ ವಿ. ಸಾಲಿಯಾನ್.—ಮಾನ್ಯ ಮಂತ್ರಿಗಳು ಜಿಲ್ಲಾಪರಿಷತ್ತಿಗೆ ಆದೇಶ ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ನಾವು ಈ ವಿಚಾರವಾಗಿ ಜಿಲ್ಲಾಪರಿಷತ್ತಿನಲ್ಲಿ ಚರ್ಚೆ ಮಾಡಿದಾಗ, ಅವರು ಪಿ.ಡಬ್ಲ್ಯು.ಡಿ. ನವರು ರಿಪೇರಿ ಮಾಡಬೇಕೆಂದು ಹೇಳುತ್ತಿದ್ದಾರೆ. ಹೀಗಾಗಿ ಜಿಲ್ಲಾಪರಿಷತ್‌ನವರು ಮಾಡಬೇಕೋ. ಅಥವಾ ಪಿ.ಡಬ್ಲ್ಯು.ಡಿ.ಪಾರ್ಟ್‌ಮೆಂಟ್‌ನವರೂ ಮಾಡಬೇಕೋ ಎಂಬುದು ಗೊತ್ತಾಗುತ್ತಿಲ್ಲ. ಆದುದರಿಂದ ತಾವು ಆದಷ್ಟು ಬೇಗ, ಪಿ.ಡಬ್ಲ್ಯು.ಡಿ ನವರಿಗೆ ಆದೇಶ ಕೊಟ್ಟು ಇರತಕ್ಕ ಕುಂದುಕೊರತೆಗಳನ್ನು ಈಡೇರಿಸಿಕೊಡಬೇಕೆಂದೂ ಒತ್ತಾಯಿಸುತ್ತೇನೆ.

ಶ್ರೀ ಬಿ ರಾಚಯ್ಯ.—ಈಗಾಗಲೇ ಜಿಲ್ಲಾಪರಿಷತ್ತಿಗೆ ಈ ಕೆಲಸಗಳನ್ನು ವರ್ಗಾಯಿಸಿದ್ದೇವೆ. ಮತ್ತು ಮಂಜೂರ್ಮಾಡಿದ ಹಣವನ್ನು ವರ್ಗಾಯಿಸಿದ್ದೇವೆ ಇದನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಶ್ರೀಮತಿ ಮನೋರಮಾ ಮಧ್ವರಾಜ್‌ರವರು ಮತ್ತು ಸಾಲಿಯಾನ್‌ರವರು ಹೋಗಿ ಹೇಳಿದರೆ ಅವರು ಸುಲಭವಾಗಿ ಮಾಡಿಕೊಡುತ್ತಾರೆ.

ಶ್ರೀ ವಸಂತ ವಿ. ಸಾಲಿಯಾನ.—ಈ ಆಸ್ಪತ್ರೆ ರಿಪೇರಿ ಕೆಲಸ ಜಿಲ್ಲಾ ಪರಿಷತ್ತಿಗೆ ಬರುವುದಿಲ್ಲ. ತಾವು ಕೊಟ್ಟಿರತಕ್ಕ ಆದೇಶ ಜಿಲ್ಲಾಪರಿಷತ್ತಿಗೆ ಬರಲಿಲ್ಲ. ಆದುದರಿಂದ ಅವರು ಪಿ.ಡಬ್ಲ್ಯು.ಡಿ. ಇಲಾಖೆಯವರು ಮಾಡಬೇಕೆಂದು ಹೇಳುತ್ತಿದ್ದಾರೆ. ದಯವಮಾಡಿ ಆದಷ್ಟುಬೇಗ ಆಜ್ಞೆಯನ್ನು ಹೊರಡಿಸಿ, ಪಿಡಬ್ಲ್ಯು.ಡಿ. ಅಥವಾ ಜಿಲ್ಲಾ ಪರಿಷತ್ ಮುಖಾಂತರ ಈ ಆಸ್ಪತ್ರೆ ಕಟ್ಟಡವ ರಿಪೇರಿ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಜಿಲ್ಲಾಪರಿಷತ್ತಿಗೆ ವರ್ಗಾಯಿಸಿದ ಮೇಲೆ, ಇದರ ಜವಾಬ್ದಾರಿ ಅವರಿಗೆ ಸೇರಿದ್ದು. ಮಂಜೂರ್ಮಾಡಿರುವ ಹಣ ಕೂಡ ಅವರಿಗೇ ಸೇರಿದ್ದು ಮತ್ತೆ ವಾಪಸ್ ತೆಗೆದುಕೊಳ್ಳುವುದು ನಾವುಗಳು ಒಪ್ಪಿರತಕ್ಕ ನೀತಿಗೆ ವಿರುದ್ಧವಾದುದು.

## ತುಮಕೂರಿನಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳನ್ನು ಸುಟ್ಟಿರುವುದು

೨೩೫೮. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಮಕೂರಿನಲ್ಲಿ ಸಿದ್ದಗಂಗಾ ಮಠಕ್ಕೆ ಸಂಬಂಧಿಸಿದಂತೆ ನಡೆದ ಗಲಭೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಎಷ್ಟು ಬಸ್ಸುಗಳನ್ನು ಸುಡಲಾಗಿದೆ.